ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 59 ಎಲ್‌ಆರ್‌ಎಂ 88

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ 21-12-1988.

ವಿಭಾಗಾಧಿಕಾರಿಗಳು
ಬೆಂಗಳೂರು, ಗುಲ್ಬರ್ಗ, ಮೈಸೂರು, ಬೆಳಗಾಂ.

ಮಾನ್ಯರೇ,

ವಿಷಯ:— ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಅನ್ವಯ ಮಾಜಿ ಭೂ ಮಾಲೀಕರಿಗೆ ಕೊಡಬೇಕಾದ ಪರಿಹಾರವನ್ನು ನಗದು ಹಾಗೂ ರಾಷ್ಟ್ರೀಯ ಉಳಿತಾಯ ಪತ್ರಗಳ ಮೂಲಕ ಸಂದಾಯ ಮಾಡಲು ಹಣ ಬಿಡುಗಡೆ.

ಉಲ್ಲೇಖ:— ಸರ್ಕಾರದ ಇದೇ ಕ್ರಮ ಸಂಖ್ಯೆಯ ಆದೇಶಗಳು ದಿನಾಂಕ 26-8-88 ಮತ್ತು 2-12-88.

---

ಉಲ್ಲೇಖದ ಎರಡು ಆದೇಶಗಳಲ್ಲಿ ಕ್ರಮವಾಗಿ ರೂ. ಮೂರು ಕೋಟಿಯಂತೆ ಇದುವರೆಗೆ ಮಾಜಿ ಭೂ ಮಾಲೀಕರಿಗೆ ಪರಿಹಾರಧನ ಸಂದಾಯ ಮಾಡಲು ಆರು ಕೋಟಿ ರೂ.ಗಳನ್ನು ಈ ವರ್ಷದಲ್ಲಿ ಬಿಡುಗಡೆ ಮಾಡಲಾಗಿದೆ. ಇಲ್ಲಿಯವರೆಗೆ ಖರ್ಚು ಮಾಡಿದ ಮೊಬಲಗನ್ನು ನೋಡಿದರೆ, ಈ ದಿಶೆಯಲ್ಲಿ ಸರಿಯಾದ ಕೆಲಸ ಆಗಿಲ್ಲವೆಂದೆನಿಸುತ್ತದೆ.

ಅನೇಕ ಜಿಲ್ಲಾಧಿಕಾರಿಗಳು ಪರಿಹಾರಧನದ ಮೇಲಿನ ಬಡ್ಡಿಗಾಗಿ ಪ್ರತ್ಯೇಕವಾಗಿ ಹಣ ಬಿಡುಗಡೆ ಮಾಡುವ ಸಾಧ್ಯತೆ ಇದೆಯೇ? ಎಂದು ಕೇಳಿರುತ್ತಾರೆ. ಆದರೆ ಆಯವ್ಯಯ ಶೀರ್ಷಿಕೆಗಳಲ್ಲಿ ಪರಿಹಾರಧನದ ಮೇಲಿನ ಬಡ್ಡಿಗಾಗಿ ಯಾವುದೇ ಪ್ರತ್ಯೇಕ ಇಲ್ಲದಿರುವುದರಿಂದ ಶೀರ್ಷಿಕೆ ಇದಕ್ಕಾಗಿ ಪ್ರತ್ಯೇಕ ಹಣ ಬಿಡುಗಡೆ ಮಾಡುವ ಸಾಧ್ಯತೆ ಇರುವುದಿಲ್ಲ. ಆದ್ದರಿಂದ ಈಗ ಬಿಡುಗಡೆ ಮಾಡಿರುವ ಹಣದಲ್ಲಿಯೇ ಪರಿಹಾರಧನದ ಮೇಲಿನ ಬಡ್ಡಿಯನ್ನು ಕೂಡ ವಿತರಣೆ ಮಾಡಬೇಕೆಂದು ಈ ಮೂಲಕ ಸ್ಪಷ್ಟೀಕರಣ ನೀಡಲಾಗಿದೆ. ಆರ್ಥಿಕ ಇಲಾಖೆಯವರು ಈಗ ಬಿಡುಗಡೆಯಾಗಿರುವ ಆರು ಕೋಟಿ ರೂಪಾಯಿ ಹಣವನ್ನು ಪೂರ್ತಿ ಉಪಯೋಗಿಸಿದ ಬಗ್ಗೆ ಖಚಿತ ಮಾಹಿತಿ ಒದಗಿಸಿದ ನಂತರ ಮಾತ್ರವೇ ಉಳಿದ ಹಣ ಬಿಡುಗಡೆ ಮಾಡುವುದಾಗಿ ಈ ಶರತ್ತನ್ನು ಹಾಕಿರುತ್ತಾರೆ. ಆದ್ದರಿಂದ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಈ ಬಗ್ಗೆ ಹೆಚ್ಚು ಎಚ್ಚರಿಕೆ ವಹಿಸಿ ಬಿಡುಗಡೆ ಮಾಡಿದ ಪರಿಹಾರಧನವನ್ನು ಜನವರಿ 1989ರೊಳಗಾಗಿ ವಿತರಣೆ ಮಾಡುವಂತೆ ವ್ಯವಸ್ಥೆ ಮಾಡತಕ್ಕದ್ದಾಗಿದೆ.

ತಾವು ಜಿಲ್ಲಾಧಿಕಾರಿಗಳ ಸಭೆ ನಡೆಸಿದಾಗ ಮತ್ತು ವಿವಿಧ ಕಛೇರಿಗಳಿಗೆ ಭೇಟಿ ನೀಡುವಾಗ ಈ ಅಂಶವನ್ನು ವಿಶೇಷವಾಗಿ ಗಮನಿಸಬೇಕೆಂದು ಕೋರಲಾಗಿದೆ. ಹಾಗೆಯೇ ಜಿಲ್ಲಾಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳು ಕೂಡ ತಹಶೀಲ್ದಾರರ ಕಛೇರಿಗೆ ಭೇಟಿ ಇತ್ತಾಗ ಮತ್ತು ತಮ್ಮ ಸಭೆಗಳಲ್ಲಿ ಈ ವಿಷಯವನ್ನು ಗಮನವಿಟ್ಟು ಪರಿಶೀಲಿಸತಕ್ಕದ್ದಾಗಿದೆ.

ಈ ಕಾರ್ಯಕ್ಕಾಗಿ ಕಾಲಮಿತಿಯನ್ನು ತಾವೇ ನಿರ್ಧರಿಸಿಕೊಂಡು ಕಾರ್ಯಾಚರಣೆ ಮಾಡುವುದು ಮತ್ತು ಈ ಬಗ್ಗೆ ನನಗೆ ಅರೆ ಸರ್ಕಾರಿ ಪತ್ರದ ಮೂಲಕ ವರದಿ ಸಲ್ಲಿಸುವುದು.

ನಿಮ್ಮ ವಿಶ್ವಾಸಿ,

(ಜಿ. ಅಲೆಗ್ಸಾಂಡರ್)
ಕಂದಾಯ ಆಯುಕ್ತರು ಮತ್ತು
ಸರ್ಕಾರದ ಕಾರ್ಯದರ್ಶಿಗಳು

ಪ್ರತಿಗಳು:—

ಎಲ್ಲಾ ಜಿಲ್ಲಾಧಿಕಾರಿಗಳು,
ಎಲ್ಲಾ ಉಪವಿಭಾಗಾಧಿಕಾರಿಗಳು,
ಎಲ್ಲಾ ತಹಶೀಲ್ದಾರರುಗಳು.